



# ಕಳೆದ ದಿನಗಳ ನೆನಪುಗಳು



(ಸ್ವಾಮಿ ವಿರಜಾನಂದರ ಜೀವನ ಹಾಗೂ ಕೆಲವು ಸಮಕಾಲೀನ ಘಟನೆಗಳು)

ಮೂಲ ಬಂಗಾಳಿ: ಸ್ವಾಮಿ ಶ್ರದ್ಧಾನಂದ

ಅನುವಾದ: ಪ್ರವ್ರಾಜಿಕಾ ಯೋಗಾತ್ಮಪ್ರಾಣಾ

## ಭಾಗ ೨೧



೧೯೧೨ನೇ ವರ್ಷವು ತಂದ ಮೊದಲ ಆಘಾತ ಮಹಾಕವಿ ಗಿರೀಶ್ ಚಂದ್ರ ಘೋಷರ ಮೃತ್ಯು. ಭಕ್ತಿ, ವಿಶ್ವಾಸಗಳ ಸಾಕಾರ ಮೂರ್ತಿಯೇ ಆಗಿದ್ದ ಈ ಪುರುಷಶ್ರೇಷ್ಠನು ಫೆಬ್ರವರಿ ೮ರಂದು ಮಧ್ಯರಾತ್ರಿ ತನ್ನ ಪಾರ್ಥಿವ ಶರೀರವನ್ನು ತ್ಯಾಗ ಮಾಡಿ, ತನ್ನ ಗುರುವಿನ ಪಾದಪದ್ಮಗಳಲ್ಲಿ ಚಿರಶಾಂತಿಮಯ ಆಶ್ರಯವನ್ನು ಪಡೆದಿದ್ದರು. ಆರು ತಿಂಗಳಿನಿಂದಲೂ ಆಸ್ತಮಾದಿಂದ ಕಷ್ಟ ಪಡುತ್ತಿದ್ದರು. ಕೊನೆಯ ದಿನ ಸಂಜೆ ಬಹಳ ತೊಂದರೆಯಿಂದಾಗಿ ಪ್ರಜ್ಞೆ ತಪ್ಪಿದ್ದಾಗ ''ನೀನು ಬಂದಿರುವುದೇ ಆದರೆ ನನ್ನ ಅಮಲನ್ನಿಳಿಸು. ಜೈ ರಾಮಕೃಷ್ಣ, ಹೊರಡೋಣ'' ಎಂದಿದ್ದರು. ಇದೇ ಅವರ ಕೊನೆಯ ಸುಸ್ಪಷ್ಟ ಮಾತಾಗಿತ್ತು. ಹಿಮಾಲಯದಲ್ಲಿದ್ದ ವಿರಜಾನಂದರ ಮನದಲ್ಲಿ ಗಿರೀಶರ ಅನೇಕ ನೆನಪುಗಳು ತೇಲಿ ಬಂದವು:

''ಗಿರೀಶ್ ಬಾಬು ಮತ್ತು ನಿರಂಜನ್ ಮಹಾರಾಜರೊಂದಿಗೆ ನಾನೊಮ್ಮೆ ಶ್ರೀಮಾತೆಯವರ ದರ್ಶನಕ್ಕೆ ಹೋಗಿದ್ದೆ. ಯಾವುದೋ ಒಂದು ಕಾರಣದಿಂದ ಮತ್ತು ನಿರಂಜನ ಮಹಾರಾಜರ ಪ್ರೇರಣೆಯಿಂದ ಗಿರೀಶ್ ಬಾಬುವಿಗೆ ಮಹಾ ವೈರಾಗ್ಯ ಉಂಟಾಯಿತು. ಅವರು ಸಂಸಾರತ್ಯಾಗ ಮಾಡುವ ದೃಢ ಸಂಕಲ್ಪ ಮಾಡಿದರು. ಆದರೆ ನಿರಂಜನ ಮಹಾರಾಜರು ಅವರಿಗೆ ಶ್ರೀಮಾತೆಯವರ ಅನುಮತಿಯನ್ನು ಪಡೆಯಬೇಕೆಂದು ತಿಳಿಸಿದರು. ಅದಕ್ಕಾಗಿಯೇ ಅವರು ಜಯರಾಂಬಾಟಿಗೆ ಬಂದದ್ದರು. ನಿರಂಜನ ಮಹಾರಾಜರನ್ನು ಗಿರೀಶ್ ಬಾಬುಗಳು ತುಂಬ ಗೌರವಿಸುತ್ತಿದ್ದುದರಿಂದ, ಶ್ರೀಮಾತೆಯವರು ಸಂನ್ಯಾಸ ತೆಗೆದುಕೊಳ್ಳಲು ಅನುಮತಿಯಿತ್ತರೆ ಅದನ್ನು ನಿರಂಜನರಿಂದ ತೆಗೆದುಕೊಳ್ಳಬೇಕೆಂದಿದ್ದರು. ಅವರಾಗ ಕುಡಿಯುವುದನ್ನು ಬಿಟ್ಟುಬಿಟ್ಟಿದ್ದರು ಮತ್ತು ಆಹಾರ ವಿಹಾರಗಳಲ್ಲಿ ತುಂಬ ಉದಾಸೀನರಾಗಿದ್ದರು.

''ಗಿರೀಶರು ಸುಖವಾಗಿ ಸ್ವ-ಇಚ್ಛೆಯಲ್ಲಿ ಬೆಳೆದವರು; ದಿನವೂ ಅವರಿಗೆ ಒಂದು ಚಿಕ್ಕ ಡಬರಿ (೧೦೦-೧೫೦) ಪಾನ್, ಮೀನು ಮತ್ತು ತಂಬಾಕು ಇರಲೇಬೇಕೆಂಬುದು ಶ್ರೀಮಾತೆಯವರಿಗೆ ತಿಳಿದಿತ್ತು. ಹಳ್ಳಿಗೆ ಬಂದಾಗ ಅವರಿಗೆ ಕಷ್ಟವಾಗದಿರಲಿ ಎಂದು ಶ್ರೀಮಾತೆಯವರು ಅವರಿಗಾಗಿ ಈ ಎಲ್ಲವನ್ನೂ ವ್ಯವಸ್ಥೆ ಮಾಡಿದ್ದರು. ಗಿರೀಶ್ ಬಾಬುಗಳು ಹಳ್ಳಿಯ ರೈತಾಪಿಗಳೊಂದಿಗೆ ತುಂಬ ಸರಸವಾಗಿ ಬೆರೆತು ನಕ್ಕು ನಗಿಸುತ್ತಿದ್ದರು.

''ಒಂದು ಸಂಜೆ ಗಿರೀಶ ಬಾಬುಗಳು ಶ್ರೀಮಾತೆಯವರಿಗೆ ಪ್ರಣಾಮ ಸಲ್ಲಿಸಲು ಹೋದರು, ನಾವೂ ಜೊತೆಯಲ್ಲಿದ್ದೆವು. ಅವರು ತಾಯಿಯವರಲ್ಲಿ ಸಂನ್ಯಾಸ ತೆಗೆದುಕೊಳ್ಳಲು ಅನುಮತಿಯನ್ನು ಬೇಡಿದರು. ಶ್ರೀಮಾತೆಯವರಾದರೋ, ಏನು ಮಾಡಿದರೂ ರಾಜಿಯಾಗಲಿಲ್ಲ. ವಿಧವಿಧವಾಗಿ ತಿಳಿಯಹೇಳಿದರು. ಶ್ರೀರಾಮಕೃಷ್ಣರು ಇವರನ್ನು ಭೈರವ, ಶಿವನ ಭೂತಗಣದವ ಎಂದೆಲ್ಲ ಹೇಳುತ್ತಿದ್ದರು; ಹಠಾತ್ತಾಗಿ ಅವರೀಗ ಅದೇ ರೂಪವನ್ನು ತಾಳಿದಂತಾದರು. ಶ್ರೀಮಾತೆಯವರು ಅವರಿಗೆ ಯಾವುದೇ ರೀತಿಯ ಆಧ್ಯಾತ್ಮಿಕ ಉನ್ನತಿಯನ್ನು ನೀಡಲಿಲ್ಲ ಎಂಬ ಕಾರಣದಿಂದ ಉತ್ತೇಜಿತರಾಗಿ, ಹಿಂದೂಮುಂದೂ ನೋಡದೆ ಕಟುವಾಕ್ಯಗಳಿಂದ ಅವರನ್ನು ನಿಂದಿಸಲಾರಂಭಿಸಿದರು. ''ನೀವು ನನಗೆ

ಏನನ್ನಾದರೂ ಮಾಡಲೇಬೇಕು, ಇಲ್ಲದಿದ್ದರೆ ನಿಮ್ಮನ್ನು ಸುಮ್ಮನೆ ಬಿಡುವುದಿಲ್ಲ'' ಎಂದು ಶ್ರೀಮಾತೆಯವರನ್ನು ಪೀಡಿಸುತ್ತ ಹಠ ಹಿಡಿದರು. ಅವರ ರೌದ್ರಾವತಾರವನ್ನು ಕಂಡು ಹೆದರಿ ಶ್ರೀಮಾತೆಯವರು ಕೊಠಡಿಯ ಮೂಲೆಯಲ್ಲಿ ಸ್ತಂಭಿತರಾಗಿ ನಿಂತಿದ್ದರು. ಇಷ್ಟಾದರೂ ತಾಯಿ ಮಣಿಯಲಿಲ್ಲ. ತುಂಬ ಪ್ರೀತಿಯಿಂದ ಮೃದು ಸ್ವರದಲ್ಲಿ, ಆದರೂ ದೃಢವಾಗಿ ಗಿರೀಶರಿಗೆ ಸಾಂತ್ವನ ನೀಡುತ್ತ, ತುಂಬು ಹೃದಯದಿಂದ ಆಶೀರ್ವಾದ ವರ್ಷಿಸುತ್ತ, ಶ್ರೀರಾಮಕೃಷ್ಣರಲ್ಲಿ ಅವರಿಗಾಗಿ ಪ್ರಾರ್ಥಿಸುವುದಾಗಿ ಆಶ್ವಾಸನೆ ಇತ್ತರು. ನಂತರವೇ ಗಿರೀಶರು ಮಗುವಿನಂತೆ ಶಾಂತರಾಗಿ ಅಲ್ಲಿಂದ ಹೊರಬಂದರು. ತಾಯಿಯನ್ನೇ ನೆಚ್ಚಿಕೊಂಡ ಚಿಕ್ಕ ಬಾಲಕನಂತೆ ಅವರ ಭಾವವಿತ್ತು. ಕೆಲವು ದಿನಗಳ ನಂತರ ನಾವು ಕೊಲ್ಕತ್ತೆಗೆ ಹಿಂತಿರುಗಿದೆವು.''

೧೯೧೩ರಲ್ಲಿ ಸ್ವಾಮೀಜಿಯವರ ಜೀವನ ಚರಿತ್ರೆಯ ದ್ವಿತೀಯ ಸಂಪುಟ ಅಚ್ಚಾಗಿತ್ತು. ಸತತವಾಗಿ ಏಳು ವರ್ಷಗಳು ಮಾಯಾವತಿಯಲ್ಲಿ ವಿವಿಧ ಜವಾಬ್ದಾರಿಯುತ ಕೆಲಸಗಳಲ್ಲಿ ನಿರತರಾಗಿದ್ದುದರಿಂದ ಸ್ವಾಮಿ ವಿರಜಾನಂದರ ಮನಸ್ಸು, ಶರೀರಗಳಲ್ಲಿ ಬಳಲಿಕೆ ಕಂಡುಬಂತು. ಕೆಲಕಾಲ ವಿರಾಮ ಪಡೆದು ಸಂಪೂರ್ಣವಾಗಿ ಸಾಧನೆಯಲ್ಲಿ ಮುಳುಗಿರಲು ಅವರ ಮನಸ್ಸು ತವಕಪಟ್ಟಿತು. ತಮ್ಮ ಇಚ್ಛೆಯನ್ನು ವ್ಯಕ್ತಪಡಿಸಿ ಅವರು ಬೇಲೂರು ಮಠಕ್ಕೆ ಪತ್ರ ಬರೆದರು. ಆದರೆ ಹಿರಿಯರು ಒಪ್ಪಿಗೆ ನೀಡಲಿಲ್ಲ. ಸ್ವಾಮಿ ವಿರಜಾನಂದರೂ ಬಿಡುವವರಲ್ಲ! ಮಾಯಾವತಿಯ ಕೆಲಸಗಳಿಂದ ತಮಗೆ ಬಿಡುವು ಮಾಡಿ ಕೊಡಬೇಕೆಂದು ಕೇಳಿಕೊಂಡು ಮತ್ತೆ ಮತ್ತೆ ಪತ್ರ ಬರೆದರು. ಕೊನೆಗೆ ಶರತ್ ಮಹಾರಾಜರು, ''ನೀನೀಗ ಮಠಕ್ಕೆ ಬಾ. ಪರಸ್ಪರ ಮನಬಿಚ್ಚಿ ಮಾತಾಡಬಹುದು. ಪತ್ರದ ಮೂಲಕ ಅನೇಕ ಸಲ ತಪ್ಪು ತಿಳಿವಳಿಕೆ ಮೂಡುವ ಸಾಧ್ಯತೆ ಇದೆ'' ಎಂದು ಬರೆದರು. ಮಠಕ್ಕೆ ಹೋದರೆ ರಾಜಾ ಮಹಾರಾಜರ ಮತ್ತು ಶರತ್ ಮಹಾರಾಜರ ಆದೇಶವನ್ನು ಮೀರಲಾಗುವುದಿಲ್ಲವಾದ್ದರಿಂದ ರಜೆಯು ದೊರೆಯುವುದಿಲ್ಲವೆಂದು ಭಾವಿಸಿದ ಸ್ವಾಮಿ ವಿರಜಾನಂದರು ಪುನಃ ಅನುಮತಿ ಕೋರಿ ಪತ್ರ ಬರೆದರು. ಬೇರೆ ದಾರಿ ಕಾಣದೆ ಶರತ್ ಮಹಾರಾಜರು ಅವರ ಬೇಡಿಕೆಯನ್ನು ಒಂದು ಶರತ್ತಿನ ಮೇಲೆ ಮಂಜೂರು ಮಾಡಿದರು. ಅದೇನೆಂದರೆ, 'ಸ್ವಾಮೀಜಿಯವರ ಜೀವನ ಚರಿತ್ರೆಯ ದ್ವಿತೀಯ ಸಂಪುಟ ಪ್ರಕಟವಾಗಿದೆ. ಉಳಿದ ಸಂಪುಟಗಳನ್ನು ಪ್ರಕಟಗೊಳಿಸುವ ಜವಾಬ್ದಾರಿಯನ್ನು ವಿರಜಾನಂದರೇ ತೆಗೆದುಕೊಳ್ಳಬೇಕು' ಎಂದು. ವಿರಜಾನಂದರು ಅದಕ್ಕೆ ಸಮ್ಮತಿಸಿ, ''ನಾನು ಎಲ್ಲೇ ಇದ್ದರೂ ಆ ಕೆಲಸವನ್ನು ಪೂರೈಸಲು ಪ್ರಾಣವನ್ನೇ ಒತ್ತೆಯಿಟ್ಟು ಪ್ರಯತ್ನಿಸುವೆ'' ಎಂದು ತಿಳಿಸಿದರು.

ಮಾಯಾವತಿಯ ಕೆಲಸಗಳಿಂದ ಬಿಡುವು ಸಿಕ್ಕಿದಮೇಲೆ ಪರಿವ್ರಾಜಕರಾಗಿದ್ದು, ಭಿಕ್ಷಾವೃತ್ತಿಯನ್ನುವಲಂಬಿಸಿಕೊಂಡು ಏಕಾಂತದಲ್ಲಿ ಜಪಧ್ಯಾನ ಮಾಡಿಕೊಂಡಿರಬೇಕೆಂದು ವಿರಜಾನಂದರು ಆಶಿಸಿದ್ದರು. ಇದನ್ನು ತಿಳಿದ ಮದರ್ ಸೇವಿಯರ್ ತೀವ್ರವಾಗಿ ವಿರೋಧಿಸಿ, ಅವರ ಆ ವಯಸ್ಸಿನಲ್ಲಿ ಶರೀರವು ಅಷ್ಟು ಕಠೋರತೆಯನ್ನು ಸಹಿಸದೆ ದುರ್ಬಲವಾಗುವುದೆಂದೂ; ಯಾವುದಾದರೊಂದು ಅನುಕೂಲಕರವಾದ ನಿರ್ಜನ ಪ್ರದೇಶದಲ್ಲಿ ಕುಟೀರವನ್ನು ಕಟ್ಟಿಕೊಂಡು, ಸರಳವಾದ ಊಟದ ವ್ಯವಸ್ಥೆಯನ್ನು ಮಾಡಿಕೊಂಡು ತಪಸ್ಸನ್ನಾಚರಿಸುವುದೇ ಒಳ್ಳೆಯದೆಂದರು. ಅದಕ್ಕೆ ತಗಲುವ ಖರ್ಚನ್ನು ತಾವೇ ವಹಿಸಿಕೊಳ್ಳಲು ಸಹ ಮುಂದಾದರು. ಮಾತೃಹೃದಯದ ಮಿಸೆಸ್ ಸೇವಿಯರ್ ಅವರ ಈ ಬೇಡಿಕೆಯನ್ನು ತಳ್ಳಿಹಾಕಲು ವಿರಜಾನಂದರಿಗೆ ಸಾಧ್ಯವಾಗಲಿಲ್ಲ. ಮಾಯಾವತಿಗೆ ಆರು ಮೈಲುಗಳ ದೂರದಲ್ಲೊಂದು ಸ್ಥಳವಿರುವುದು ತಿಳಿದು ಬಂತು. ಅದು ನಿರ್ಜನವಾಗಿತ್ತು. ಅಲ್ಲದೆ, ನೀರಿನ ಅಭಾವವೂ ಇರಲಿಲ್ಲ. ವಿರಜಾನಂದರಿಗೆ ಆ ಸ್ಥಳವು ಇಷ್ಟವಾಯಿತು. ಆ ಜಾಗದ ಹೆಸರು ಲೋಧಾನ್ ಟುಕುರಾ. ಜಮೀನಿನ ಮಾಲಿಕನೊಬ್ಬ ಬಡ ಬ್ರಾಹ್ಮಣ. ಅವನೂ ಸಹ ಅದನ್ನು ಮಾರಲು ತುದಿಗಾಲಿನಲ್ಲಿ ನಿಂತಿದ್ದ. ಚಂಪಾವತ್‌ನ ತಹಸೀಲ್ದಾರನ ಸಹಾಯದಿಂದ ವಿರಜಾನಂದರು ಆ ಜಮೀನನ್ನು ಸುಲಭವಾಗಿ ಕೊಂಡುಕೊಂಡರು.

## ೧೩

ವಿರಜಾನಂದರು ಮಾಯಾವತಿಯ ಕೆಲಸಗಳಿಂದ ಬಿಡುವು ಪಡೆಯಬೇಕೆಂದು ಮಾಡಿರುವ ನಿರ್ಧಾರವನ್ನು ತಿಳಿದ ಹರಿ ಮಹಾರಾಜರು ಹೃಷಿಕೇಶದಿಂದ ಅವರಿಗೆ ಹೀಗೆ ಪತ್ರ ಬರೆದರು :

೯-೧೧-೧೯೧೩

ಪ್ರಿಯ ಕಾಳಿ,

ನಿನ್ನ ೧ನೇ ದಿನಾಂಕದ ಪೋಸ್ಟ್‌ಕಾರ್ಡ್ ಓದಿ ಬಹಳ ದುಃಖಗೊಂಡೆ... ನೀನು ಕೆಲಸದ ಒತ್ತಡಗಳಿಂದ ಬೇಸತ್ತು ನಿವೃತ್ತನಾಗುತ್ತಿರುವುದು ಖೇದದ ಸಂಗತಿ... ವಿಪರೀತ ಪರಿಶ್ರಮದಿಂದಾಗಿ ನಿನ್ನ ಮನೋಧರ್ಮವೂ ಬದಲಾಗಿದೆ ಎಂದು ನನಗನ್ನಿಸುತ್ತಿದೆ. ನೀನು ಹೀಗೆ ತಾಳ್ಮೆ ಕಳೆದುಕೊಳ್ಳುತ್ತಿರುವೆ ಎಂಬುದನ್ನು ಕಲ್ಪಿಸಿಕೊಳ್ಳಲೂ ನನಗೆ ಸಾಧ್ಯವಿಲ್ಲ. ನಿನ್ನ ಸಹನೆ ಅಸಾಧಾರಣವಾಗಿತ್ತು, ಮಾತ್ರವಲ್ಲದೆ ನಿನ್ನ ಮೃದು-ಮಧುರ ಸ್ವಭಾವವು ಹೇಗಿತ್ತೆಂದರೆ ಯಾರಿಗೂ ನಿನ್ನನ್ನು ಪ್ರೀತಿಸದೆ ಇರಲು ಸಾಧ್ಯವಿರಲಿಲ್ಲ. ನಿನ್ನಂತೆ ಇತರರ ಕೆಲಸ-ಕಾರ್ಯಗಳಲ್ಲಿ ನೆರವಾಗುವಂತಹ ಮತ್ತೊಬ್ಬರನ್ನು ನಾಕಾಣೆ. ಆಬಾಲವೃದ್ಧರಾದಿಯಾಗಿ ಎಲ್ಲರೂ ನಿನ್ನನ್ನು ಇಷ್ಟಪಡುತ್ತಿದ್ದವರೇ ಅಲ್ಲವೆ? ಎಲ್ಲ ಕಷ್ಟಗಳನ್ನು ಸಹಿಸಿಕೊಂಡು ನಿರಂತರವಾಗಿ ಸೇವಾನಿರತನಾಗಿರಲು ನೀನೆಂದೂ ಹಿಂಜರಿದವನಲ್ಲ ಎಂಬುದನ್ನು ನಾನು ಬಲ್ಲೆ. ಅಂತಹ ನೀನು ಈ ತರಹದ ಪೇಚಾಟಕ್ಕೆ ಸಿಲುಕಿರುವೆ ಎಂದರೆ ಖಂಡಿತವಾಗಿಯೂ ನಿನ್ನ ಸ್ನಾಯುಗಳು ಮೊದಲಿನಂತೆ ಸಶಕ್ತವಾಗಿಲ್ಲ ; ವಿಪರೀತ ಪರಿಶ್ರಮ, ಉದ್ವೇಗದಿಂದಾಗಿ ಅವುಗಳು ದುರ್ಬಲವಾಗಿವೆ.... ನಿನಗೀಗ ವಿಶ್ರಾಂತಿಯು ಅತ್ಯಗತ್ಯ ಎಂಬುದರಲ್ಲಿ ಎರಡು

ಮಾತಿಲ್ಲ. ನೀನು ಮಾಯಾವತಿಯಲ್ಲಿರದೆ, ಬೇಲೂರು ಮಠಕ್ಕೋ ಅಥವಾ ಮತ್ತಾವುದಾದರೂ ಸ್ಥಳಕ್ಕೋ ಹೋದರೆ ಹೆಚ್ಚು ಪ್ರಯೋಜನವಾಗುವುದೆಂಬುದೇ ನನ್ನ ಅನಿಸಿಕೆ. ನೀನು ಹಠಾತ್ತಾಗಿ ರಿಟೈರ್ ಆಗಬಾರದೆಂಬುದೇ ನನ್ನ ಹಾರೈಕೆ.

ಸ್ವಾಮೀಜಿಯವರ ಕೆಲಸದಲ್ಲಿ ಕಾರ್ಯೋನ್ಮುಖನಾಗುವುದಕ್ಕೂ, ತಪಶ್ಚರ್ಯೆಗೂ ವ್ಯತ್ಯಾಸವಿದೆಯೇನು? ನಾವು ಭಗವಂತನಿಗೆ ಆಪ್ತರಾಗಬೇಕು. ಅದನ್ನು ಬಿಟ್ಟು ಮತ್ತಿನ್ನಾವ ಸಾಧನೆಯನ್ನೂ ನಾಕಾಣೆ. ಹೇಗಾದರೂ ಸರಿ, ನಾವು ಭಗವಂತನಿಗೆ ಪ್ರಿಯರಾದರೆ ಸಾಕು! ಅದೇ ನಮ್ಮ ಸಾಧನೆಗಳ ಗುರಿಯಲ್ಲದೆ ಮತ್ತಿನ್ನೇನಾದರೂ ಇದೆಯೆ? ಆಶ್ರಮದ ಕೆಲಸಗಳನ್ನು ಮಾಡಲಾಗದಿದ್ದರೆ ಬೇಡ ಬಿಡು, ಆದರೆ ಒಬ್ಬಂಟಿಗನಾಗಿ ಉಳಿದ ಜೀವನವನ್ನು ಕಳೆಯುವೆನೆಂಬ ಮಾತು ಎಂತಹುದು? ಏನೋ ಯಾವಾಗಲಾದರೊಮ್ಮೆ ಏಕಾಕಿಯಾಗಿರಬೇಕೆನಿಸುತ್ತದೆ. ನಿಜ, ಹಾಗೆ ಮಾಡಲೂಬಹುದು. ಆದರೆ ಅದನ್ನೇ ಜೀವನದ ಉದ್ದೇಶವನ್ನಾಗಿ ಏಕೆ ಮಾಡಿಕೊಳ್ಳಬೇಕು? 'ಅವನಿಟ್ಟಂತೆ ನಾನಿರುವೆ' ಎಂಬ ಮನೋಭಾವವನ್ನು ಹೊಂದಿರುವುದು ಒಳ್ಳೆಯದಲ್ಲವೇನು? 'ಎಲ್ಲವೂ ಅವನಿಚ್ಛೆಯಂತೆ ಆಗುವುದೇ ಹೊರತು, ನಮ್ಮ ಇಚ್ಛೆಯೇನೂ ನಡೆಯುವುದಿಲ್ಲ' ಎನ್ನುವುದೇ ನನ್ನ ಇಡೀ ಜೀವನದ ಅನುಭವ. ಅದು ಹಾಗಿರಲಿ, ಜಗನ್ಮಾತೆಯು ನಿನಗೆ ಶೀಘ್ರವೇ ಉತ್ತಮ ಆರೋಗ್ಯವನ್ನು ನೀಡಲಿ, ಅದರಿಂದಲೇ ಸನ್ಮಂಗಳ... ನನ್ನ ಪ್ರೀತಿಯ ಆಶೀರ್ವಾದಗಳು ಸದಾ ನಿನ್ನೊಂದಿಗಿವೆ ಎಂಬುದನ್ನು ತಿಳಿ.

ಇತಿ ನಿನ್ನ,

ತುರೀಯಾನಂದ

ಬಾಣವನ್ನೆಸೆದಾಗಿದೆ, ಅದನ್ನು ಹಿಂದಕ್ಕೆ ಪಡೆಯಲು ಸಾಧ್ಯವೆ? ವಿರಜಾನಂದರು ಏಕಾಂತವಾಸ ಮಾಡಬೇಕೆಂದು ಆಗಲೇ ನಿರ್ಧರಿಸಿಯಾಗಿದೆ. ಆದ್ದರಿಂದ ಹರಿ ಮಹಾರಾಜರ ಸಲಹೆಯನ್ನು ಚಾಚೂ ತಪ್ಪದೆ ಪಾಲಿಸುವಂತಹ ಮಾನಸಿಕ ಸ್ಥಿತಿಯಲ್ಲಿ ಅವರೀಗ ಇಲ್ಲ. ಆದರೆ ಮುಂದೆ ಅವರು ಜೀವನ್ಮುಕ್ತ ಮಹಾಪುರುಷರಾದ ತುರೀಯಾನಂದರ ಆದೇಶವನ್ನು ಅಕ್ಷರಶಃ ಪಾಲಿಸುವಂತಾಯಿತು. ತಮ್ಮ ಜೀವನದ ಕೊನೆಯ ೨೫ ವರ್ಷಗಳನ್ನು ವಿರಜಾನಂದರು ಸಂಪೂರ್ಣವಾಗಿ 'ಸ್ವಾಮೀಜಿಯವರ ಕಾರ್ಯ'ಕ್ಕೆ ಸಮರ್ಪಿಸಿದರು.

ಮಾಯಾವತಿಯ ಅದ್ವೈತ ಆಶ್ರಮದ ಅಧ್ಯಕ್ಷತೆಯನ್ನು ತೊರೆಯುವ ಮುನ್ನ ಮಿಸ್ ಮ್ಯಾಕ್ಲಿಯಾಡ್ (ಸ್ವಾಮೀಜಿಯವರ ಶಿಷ್ಯೆ ಜಯಾ) ಅಮೇರಿಕೆಯಿಂದ ಬರೆದ ಉತ್ಸಾಹಭರಿತ ಪತ್ರವು ವಿರಜಾನಂದರ ಕೈಸೇರಿತು. ಅದರಲ್ಲಿ ಅವರು ಹೀಗೆ ಬರೆದಿದ್ದರು:

ರಾಯ್ ಕ್ರಾಫ್ಟ್‌ರ್ಸ್,

ಈಸ್ಟ್ ಐನೋರ್, ನ್ಯೂಯಾರ್ಕ್

ನವೆಂ. ೨೬, ೧೯೧೩

ಪ್ರಿಯ ಸ್ವಾಮಿ,

...ಮಾಯಾವತಿಯ ಅವಿಶ್ರಾಂತ ಕೆಲಸಗಳಿಗೆ ನೀವು ಅದೆಷ್ಟು ನಿಷ್ಠೆಯಿಂದ ಹೆಗಲನ್ನಿತ್ತಿರುವಿರಿ! ಎರಡು ತಿಂಗಳ ಮಟ್ಟಿಗಾದರೂ ನೀವು ವಿಶ್ರಾಂತಿ ಪಡೆದು ಬಂದಿದ್ದರೆ ಚೆನ್ನಾಗಿರುತ್ತಿತ್ತು. ಇದರಿಂದ ನಿಮ್ಮ ಬಗ್ಗೆ, ನೀವು ಮಾಡುತ್ತಿರುವ ಕೆಲಸದ ಬಗ್ಗೆ ಹೊಸ ದೃಷ್ಟಿಕೋನ ಮೂಡುತ್ತಿತ್ತು. ನೀವೇ ನೋಡುತ್ತಿರುವಂತೆ ನಿರಂತರ ಬಳಕೆ ಮತ್ತು ಘರ್ಷಣೆಯಿಂದಾಗಿ ಲೋಹದ ವಸ್ತುಗಳು ನುಣುಪಾಗುವಂತೆ ನಿಮ್ಮ ಕೆಲಸಕಾರ್ಯಗಳೂ ಕೂಡ ದಿನದಿಂದ ದಿನಕ್ಕೆ ಉತ್ತಮಗೊಳ್ಳುತ್ತಿವೆ... ಪ್ರಬುದ್ಧ ಭಾರತವು ಈಗ ಬಹಳ ಚೆನ್ನಾಗಿ ಮೂಡಿಬರುತ್ತಿದೆ.

ಇನ್ನು ಹದಿನೈದು-ಇಪ್ಪತ್ತು ವರ್ಷಗಳಲ್ಲಿ ನಿಮ್ಮ ಶಾರೀರಿಕ ಬಲವು ಸಹಜವಾಗಿಯೇ ಕುಂದುವುದು. ಅಷ್ಟರೊಳಗೆ ನಮ್ಮ ಪ್ರವಾದಿಯ ಹಿಮಾಲಯ ಕೇಂದ್ರದ ಕೆಲಸವನ್ನು ಮುಂದುವರಿಸಿಕೊಂಡು ಹೋಗುವಂತಹ ಅನುಯಾಯಿಗಳ ಪರಂಪರೆಯನ್ನೇ ನೀವು ಸೃಷ್ಟಿಸಿಬಿಡಬಹುದು. ಅದೆಂತಹ ಗೌರವಯುತ ಕೆಲಸ! ಜೀವನದ ಈ ೧೮ ವರ್ಷಗಳಲ್ಲಿ, ನನ್ನ ಹೃನ್ಮನಗಳಲ್ಲಿ ಸ್ವಾಮೀಜಿ ಮತ್ತು ಅವರ ಆದರ್ಶಗಳ ಆಲೋಚನೆ ಬಿಟ್ಟು ಇನ್ನಾವ ಆಲೋಚನೆಗಳೂ ಸುಳಿದಿಲ್ಲ. ಅಲ್ಲದೆ ಆ ವರ್ಷಗಳಲ್ಲಿ ಹೆಚ್ಚು ಕಡಿಮೆ ನಾನು ಹೆಳವಿಯೇ ಆಗಿದ್ದೆ. ಸೋದರಿ ಕ್ರಿಸ್ಟೀನ್‌ಗೆ ಆಗುತ್ತಿರುವಂತೆ ನನ್ನಲ್ಲಿಯೂ ಈಗ ಶಕ್ತಿಸಂಚಾರವಾಗುತ್ತಿದೆ ಮತ್ತು ಬಹುಶಃ ಮುಂದಿನ ನಲ್ವತ್ತು ವರ್ಷಗಳವರೆಗೂ ನಾವು ಆ ಆದರ್ಶಕ್ಕಾಗಿ ದುಡಿಯುವುದನ್ನು ಜಗತ್ತು ಕಾಣಲಿದೆ. ಈ ಭಾವನೆಗಳೆಲ್ಲ ಮನದಾಳದಲ್ಲಿ ಸುಪ್ತವಾಗಿದ್ದು ಈಗ ಮೇಲೆದ್ದು ಬರುತ್ತಿರುವುದನ್ನು ಕಂಡರೆ ಆಶ್ಚರ್ಯವಾಗುವುದಲ್ಲವೆ? ನೀವು ಇನ್ನೂ ಕೆಲವು ತಿಂಗಳುಗಳ ಕಾಲ ಅಥವಾ ಒಂದು ವರ್ಷ ರಜೆಯನ್ನೇ ತೆಗೆದುಕೊಂಡರೂ ಸಹ, ಅವರ ಅಂತರಂಗ ಶಿಷ್ಯರಾದ ನೀವು ಸ್ವಾಮೀಜಿಯವರಿಗೆ ಪ್ರಿಯವಾದ ಹಿಮಾಲಯದಲ್ಲಿ , ಅವರು ಜಗತ್ತಿಗೆ ನೀಡಲು ಬಯಸಿದ ಆಧ್ಯಾತ್ಮಿಕ ಸತ್ಯಗಳನ್ನು ಮತ್ತೆ ಪ್ರಚಾರ ಮಾಡುವುದರಲ್ಲಿ ತಲ್ಲೀನರಾಗಿರುವುದನ್ನು ನಾವು ನೋಡಲಿಚ್ಛಿಸುತ್ತೇವೆ. ಇದನ್ನು ಸ್ವಲ್ಪ ಆಳವಾಗಿ ಆಲೋಚಿಸಿ ಕೆಲಕಾಲದ ಮಟ್ಟಿಗೆ ನಿಮ್ಮ ಕೆಲಸವನ್ನು ಹಗುರಗೊಳಿಸಲಿಕ್ಕಾಗಲಿ, ಅಥವಾ ನಿಮಗೆ ಕೆಲಕಾಲದ ವಿಶ್ರಾಂತಿ ನೀಡಲು ನನ್ನಿಂದ ಸಾಧ್ಯವಿದ್ದರೆ ತಿಳಿಸಿ, ಸಿದ್ಧಳಿರುವೆ... ಒಂದೇ ರೀತಿಯ ಕೆಲಸವನ್ನು ಅನವರತ ಮಾಡಿದ ನಂತರ ಸ್ವಲ್ಪ ವಿಶ್ರಾಂತಿಯ ಆವಶ್ಯಕತೆ ಖಂಡಿತವಾಗಿಯೂ ಇದೆ.

ನಾನಿಂದು ನ್ಯೂಯಾರ್ಕಿನ ವ್ಯೋಮಿಂಗ್‌ನಲ್ಲಿರುವ ಮಿಸೆಸ್ ಕೂನ್ಲಿ ವಾರ್ಡ್‌ಳ ಮನೆಗೆ ಹೋಗುತ್ತಿರುವೆ. ಡಿಸೆಂಬರ್ ೧೧ರವರೆಗೆ ಅಲ್ಲಿರುತ್ತೇನೆ... ಆಕೆಗೆ ಸ್ವಾಮೀಜಿಯವರ ಪರಿಚಯವಿತ್ತು, ಮತ್ತು ಸೋದರಿ ನಿವೇದಿತೆಗೆ ೧೦೦ ಡಾಲರ್‌ಗಳನ್ನು ಕೊಟ್ಟಿದ್ದಾರೆ; ಈಗ ಅವರಿಬ್ಬರ ಮತ್ತು ಅಲ್ಲಿಯ ಕೆಲಸದ ಬಗ್ಗೆ ತಿಳಿಯಲು ಆಸಕ್ತಳಾಗಿದ್ದಾಳೆ. ಸ್ವಲ್ಪ ಸ್ವಲ್ಪವಾಗಿ ಬೀಜವು ಹೇಗೆ ಮೊಳೆಯುತ್ತಿದೆ

ಎಂಬುದನ್ನು ನೋಡಿ! ಸ್ವಾಮೀಜಿಯವರ ಭಾಷಣದ ಲಿಪಿಕಾರನಾದ ಮಿ. ಗುಡ್‌ವಿನ್‌ಗೆ ನಾವೆಲ್ಲ ಹೇಗೆ ಋಣಿಗಳೋ ಅಂತೆಯೇ ಅವುಗಳನ್ನು ಮುದ್ರಿಸಿದ್ದಕ್ಕಾಗಿ ನಿಮಗೂ ಸಹ ಋಣಿಗಳು. ಮತ್ತು ಇದಕ್ಕಾಗಿ ಧನಸಹಾಯ ಮಾಡಿದ ಮಿಸೆಸ್ ಸೇವಿಯರ್‌ಗೂ ಋಣಿಗಳು. ಚಿಕ್ಕ ಚಿಕ್ಕ ತುಂಡುಗಳನ್ನು ಸರಿಯಾಗಿ ಜೋಡಿಸಿದ ನಂತರವೇ ತಿಳಿಯುವಂತಹ ಚೀನೀ ಒಗಟಿನಾಟ (ಪಝಲ್)ದಂತೆ ನಮ್ಮೆಲ್ಲರ ಕೆಲಸಗಳೂ ಅಪೂರ್ವವಾಗಿ ಸೇರಿ, ಆಹಾ! ಎಂತಹ ಸುಂದರ ದೃಶ್ಯವನ್ನು ಮೂಡಿಸುತ್ತಿವೆ! ನನ್ನ ಭಾಗದ ಕೆಲಸವು ಸ್ವಾಮೀಜಿಯವರನ್ನು 'ಗುರುತಿಸು'ವುದೇ ಆಗಿತ್ತು. ಮೊದಲ ಬಾರಿ ಅವರನ್ನು ನೋಡಿದಾಗ ಸತ್ಯವನ್ನೇ ಎದುರುಗೊಂಡಂತಾಯಿತು. ಇಂದಿಗೂ ಸಹ ಆ ಅನಿಸಿಕೆ ಹಾಗೆಯೇ ಇದೆ. ಆ ಸತ್ಯದ ಮಹತ್ತ್ವದ ಬೆಳಕು ಎಂದಿಗೂ ಮಿಣಿಕಿಲ್ಲ, ಮಸುಕಿಲ್ಲ. ೧೯ ವರ್ಷಗಳ ನಂತರ (ಜನವರಿ ೨೯, ೧೮೯೫ರಿಂದ ಹಿಡಿದು) ಇದೀಗ ನಾನು ಅದರ ಬಗ್ಗೆ ಹೇಳಲು ಶಕ್ತಳಾಗಿರುವೆ. ಆದರೆ ನೀವು?! ನೀವು ಅವರ ಸಂದೇಶವನ್ನು ಸಾವಿರಾರು ಜನರಿಗೆ ತಲುಪಿಸಿದ್ದೀರಿ! ಮತ್ತು ೨೦ ವರ್ಷಗಳ ಕಾಲ ಇದನ್ನು ಮುಂದುವರೆಸುವಿರೆಂದು ಆಶಿಸುವೆ. ನೀವು ಸ್ವಾಮೀಜಿಯವರನ್ನು ಮೊದಲು ಕಂಡದ್ದು ಯಾವಾಗ? ತದನಂತರ ಇಲ್ಲಿಯವರೆಗೆ ನಡೆದದ್ದೇನು? ಇವನ್ನೆಲ್ಲ ವಿಶದವಾಗಿ ನನಗೆ ನೀವು ತಿಳಿಸಲೇಬೇಕು.

ಮುಂದೆ ಎಂದಾದರೂ ಒಂದು ದಿನ ನಾವಿಬ್ಬರೂ ಭೇಟಿಯಾಗಬಹುದಲ್ಲವೆ? ನಾನು ಸುಲಭವಾಗಿ ಭಾರತಕ್ಕೆ ಬರಬಹುದು, ಬಹುಶಃ ಸಮಯ ಬಂದಾಗ. ಅಥವಾ ಬಾರದೆಯೂ ಇರಬಹುದು. 'ಎಲ್ಲವೂ ಅವನಿಚ್ಛೆಯಂತೆ'. ಏನಾದರಾಗಲಿ, ನೀವು ನನಗೆ ಬರೆಯುವ ಪತ್ರವನ್ನು ಕೆಳಗಿನ ವಿಳಾಸಕ್ಕೆ ಬರೆಯಿರಿ:

ಮನ್ರೋ ಅಂಡ್ ಕಂಪನಿ, ೭ ರೂ ಸ್ಕ್ರೈಬ್, ಪ್ಯಾರಿಸ್, ಫ್ರಾನ್ಸ್. ಬದಲಾಗುವ ಈ ಪ್ರಪಂಚದಲ್ಲಿ ಇದೇ ನನ್ನ ಬದಲಾಗದ ವಿಳಾಸ.

ನಿನ್ನ ಮಮತೆಯ
ಜೋಸೆಫಿನ್ ಮ್ಯಾಕ್‌ಲಿಯಾಡ್

೧೯೧೩ರ ಡಿಸೆಂಬರ್ ೧೫ರಂದು ಸ್ವಾಮಿ ವಿರಜಾನಂದರಿಂದ ಮಾಯಾವತಿಯ ಅದ್ವೈತ ಆಶ್ರಮದ ಜವಾಬ್ದಾರಿಯನ್ನು ವಹಿಸಿಕೊಂಡವರು ಸ್ವಾಮಿ ಪ್ರಜ್ಞಾನಂದರು. ಇವರ ಹಿಂದಿನ ಹೆಸರು, ದೇವವ್ರತ ಬಸು. ಇವರು ಈ ಹಿಂದೆ ಸ್ವದೇಶಿ ಚಳುವಳಿಯ ನೇತಾರರಲ್ಲೊಬ್ಬರಾಗಿದ್ದು ಆಲಿಪುರದ ಬಾಂಬ್ ಕೇಸಿನಲ್ಲಿ ಶ್ರೀ ಅರವಿಂದರೊಂದಿಗೆ ಇವರೂ ಸಹ ಕಾರಾಗೃಹಕ್ಕೆ ಹೋಗಿದ್ದರು. ಆಜಾನುಬಾಹುವೂ, ಸೌಮ್ಯರೂ, ತೇಜಃಪುಂಜ ವ್ಯಕ್ತಿತ್ವವುಳ್ಳವರೂ ಆದ ಇವರ ಮನಸ್ಸು ಚಿಂತನಾಶೀಲವಾಗಿತ್ತು. ಸ್ವಾಮಿ ವಿವೇಕಾನಂದರ ತ್ಯಾಗ-ಸೇವೆಗಳ ಆದರ್ಶದಿಂದ ಪ್ರಭಾವಿತರಾದ ಇವರು ತಮ್ಮ ಸ್ವದೇಶೀ ಚಟುವಟಿಕೆಗಳನ್ನು ತ್ಯಜಿಸಿ ಬೇಲೂರು ಮಠವನ್ನು ಸೇರಿದ್ದರು. ಮಾಯಾವತಿಗೆ ಬರುವುದಕ್ಕೆ ಮೊದಲು ಇವರು ಒಂದು ವರ್ಷ ಕಾಲ 'ಉದ್ಬೋಧನ' ಎಂಬ ಬಂಗಾಳಿ ಪತ್ರಿಕೆಯ ಸಂಪಾದಕರಾಗಿದ್ದರು. ಮಾಯಾವತಿಯಲ್ಲಿ ಸೇವೆ ಸಲ್ಲಿಸಲು ಪ್ರಜ್ಞಾನಂದರೊಂದಿಗೆ ಬ್ರಹ್ಮಚಾರಿ ಭರತ್ (ಮುಂದೆ ಸ್ವಾಮಿ ಅಭಯಾನಂದ) ಮತ್ತು ಬ್ರಹ್ಮಚಾರಿ ಸೀತಾಪತಿಯವರೂ (ಮುಂದೆ ಸ್ವಾಮಿ ರಾಘವಾನಂದ) ಸಹ ಬಂದಿದ್ದರು. ಈ ಹಿಂದೆ ಬ್ರಹ್ಮಚಾರಿ ನಿರ್ಮಲ್ (ಸ್ವಾಮಿ ಮಾಧವಾನಂದ) ೧೯೧೨ರಲ್ಲಿ ಮಾಯಾವತಿಯಿಂದ ಹೊರಟುಹೋಗಿದ್ದರು; ಗುರುದಾಸರೂ (ಸ್ವಾಮಿ ಅತುಲಾನಂದರು) ಕೂಡ ಅಮೆರಿಕಾಗೆ ಹಿಂತಿರುಗಿದ್ದರು.

ಜವಾಬ್ದಾರಿಯುತ ಕೆಲಸದಿಂದ ಬಿಡುವು ಸಿಕ್ಕಮೇಲೆ ಅದೇ ಪರಿಸರದಲ್ಲಿ ಏಕೆ ಇರಬೇಕು? ಎಂದು ಯೋಚಿಸಿದ ಸ್ವಾಮಿ ವಿರಜಾನಂದರು ಆಶ್ರಮದ ಕಟ್ಟಡದಿಂದ ಒಂದು ಫರ್ಲಾಂಗ್ ದೂರ ದಲ್ಲಿದ್ದ ಮಿಸೆಸ್ ಸೇವಿಯರ್ ಅವರ ಕಟ್ಟಡದಲ್ಲಿ ಇರಲಾರಂಭಿಸಿದರು. (ಇದನ್ನು ಮುಂದೆ Mother's Bungalow — 'ಮದರ್ ಅವರ ಬಂಗಲೆ' ಎಂದು ಕರೆಯುತ್ತಿದ್ದರು). ೧೯೧೩ನೇ ಇಸವಿ ಮುಗಿಯಲು ೧೭ ದಿನಗಳು ಉಳಿದಿದ್ದವು. ಈ ೧೭ ದಿನ ಗಳನ್ನು ನಿಶ್ಚಿಂತೆಯಿಂದ ಕಳೆದು, ಜನವರಿ ೧ ರಿಂದ ಸ್ವಾಮೀಜಿಯವರ ಜೀವನ ಚರಿತ್ರೆಯ ಉಳಿದ ಎರಡು ಖಂಡ ಗಳನ್ನು ಮುದ್ರಿಸುವ ಕೆಲಸವನ್ನು ಕೈಗೆತ್ತಿಕೊಳ್ಳಬೇಕೆಂದು ಅವರು ನಿಶ್ಚಯಿಸಿದರು. ಏಳು ವರ್ಷಗಳ ಗುರುತರ ಪರಿಶ್ರಮದ ನಂತರ ದೊರೆತ ೧೭ ದಿನಗಳ ವಿಶ್ರಾಂತಿಯನ್ನು ಮನದಣಿಯೆ ಸವಿದರು. ಇದರಮಧ್ಯದಲ್ಲೆಎರಡುಬಾರಿಕೆಲವುಸಾಧು-ಬ್ರಹ್ಮಚಾರಿಗಳನ್ನು ಕರೆದೊಯ್ದು, ತಾವು ತಪಸ್ಸಿಗಾಗಿ ಕೊಂಡುಕೊಂಡಿದ್ದ ಲೋಧಾನ್ ಟುಕುರಾ ಎಂಬ ಜಾಗದಲ್ಲಿ ವನಭೋಜನ (ಪಿಕ್‌ನಿಕ್) ಮಾಡಿ ಬಂದರು.

*(ಮುಂದುವರಿಯುವುದು)*

## ನಿಜವಾದ ಸಂನ್ಯಾಸಿಗಳು

ಹಿರಿಯ ಗೋಪಾಲನು (ಮುಂದೆ ಸ್ವಾಮಿ ಅದ್ವೈತಾನಂದರು) ಸಂನ್ಯಾಸಿಗಳಿಗೆ ಕಾವಿಬಟ್ಟೆ ಹಂಚಿ ಪುಣ್ಯ ಸಂಪಾದನೆ ಮಾಡಲೆಂದು ಕೊಲ್ಕತ್ತದ ಜಗನ್ನಾಥ ಘಾಟ್‌ಗೆ ಹೊರಟಾಗ, ಅದನ್ನು ತಿಳಿದ ಶ್ರೀರಾಮಕೃಷ್ಣರು ಅವನಿಗೆ ಹೀಗೆಂದರು: ''ನೀನು ಅವುಗಳನ್ನು ಜಗನ್ನಾಥ ಘಾಟ್‌ಗೆ ಬರುವ ಸಂನ್ಯಾಸಿಗಳಿಗೆ ಕೊಡುವ ಬದಲು ನನ್ನ ಈ ಮಕ್ಕಳಿಗೆ (ಶಿಷ್ಯಂದಿರಿಗೆ) ದಾನ ಮಾಡಿದರೆ ಸಾವಿರಪಾಲು ಪುಣ್ಯ ಬರುತ್ತದೆ. ಸರ್ವವನ್ನೂ ತ್ಯಾಗ ಮಾಡಿದ ಇಂತಹ ಸಂನ್ಯಾಸಿಗಳನ್ನು ನೀನು ಮತ್ತೆಲ್ಲಿ ಹುಡುಕಲು ಸಾಧ್ಯ ? ಇವರಲ್ಲಿ ಪ್ರತಿಯೊಬ್ಬರೂ ಸಾವಿರ ಸಂನ್ಯಾಸಿಗಳಿಗೆ ಸಮ.''

*(ದೇವರೊಡನೆ ಬಾಳಿದವರು, ಭಾಗ ೧, ಪು. ೬೦೮)*